■ ವಿಶಾಖ ಎನ್.





# ಮುರಿದ ಮದುವೆಗಳತ್ತ ಕುತೂಹಲದ ಕಣ್ಣು

ಸೆಲೆಬ್ರಿಟಿಗಳ ವಿವಾಹ ವಿಚ್ಛೇದನ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿಯ ಬಗೆಗೆ ಜನರಲ್ಲಿ ಮೊದಲಿನಿಂದಲೂ ಕುತೂಹಲವೇನೋ ಇದೆ. ಆದರೆ, ಈಗ ಅದೊಂದು ವ್ಯವಸ್ಥಿತ ಸಂವಹನದ ರೂಪದಲ್ಲಿ ದಾಟುತ್ತಿದೆ. ಸ್ವರ ಸಂಯೋಜಕ ಎ.ಆರ್. ರೆಹಮಾನ್ ಹಾಗೂ ಅವರ ಪತ್ನಿ ಸಾಯಿರಾ ಬಾನು ಇಪ್ಪತ್ತೊಂಬತ್ತು ವರ್ಷಗಳ ದಾಂಪತ್ಯಕ್ಕೆ ಪೂರ್ಣವಿರಾಮ ಇಟ್ಟ ಸುದ್ದಿ ಹೊರಬಿದ್ದ ಒಂದೇ ದಿನದಲ್ಲಿ ಇನ್ನೊಂದು ಸುದ್ದಿ ಬಂತು. ರೆಹಮಾನ್ ಅವರ ವಾದ್ಯಗಾರರ ತಂಡದಲ್ಲಿ ಬಾಸಿಸ್ಟ್ ಆಗಿರುವ ಮೋಹಿನಿ ಡೇ ಅವರೂ ತಮ್ಮ ಪತಿ ಮಾರ್ಕ್ ಹಾರ್ಟ್‌ಸಚ್ ಅವರಿಂದ ವಿಚ್ಛೇದನ ಪಡೆದಿದ್ದಾರೆ ಎನ್ನುವುದು ಆ ಸುದ್ದಿ. ರೆಹಮಾನ್‌ಗೂ ಮೋಹಿನಿ ಡೇ ಅವರಿಗೂ ಏನಾದರೂ ಸಂಬಂಧವಿದೆಯೇ ಎಂದು ಪ್ರಶ್ನಾರ್ಥ ಚಿಹ್ನೆ ಹಾಕಿ ಕೆಲವು ಮಾಧ್ಯಮಗಳು ಬರೆಯತೊಡಗಿದವು.

ವಕೀಲೆ ವಂದನಾ ಶಾ ಅವರಿಗೀಗ ಕೈತುಂಬಾ ಕೆಲಸ. ಅವರು ರೆಹಮಾನ್ ಹಾಗೂ ಸಾಯಿರಾ ಬಾನು ವಿಚ್ಛೇದನ ಕುರಿತ ಸುದ್ದಿಯನ್ನು ಅಧಿಕೃತವಾಗಿ ಮಾಧ್ಯಮಗಳಿಗೆ ತಿಳಿಸಿದ್ದರು. ಈಗ ಈ ವದಂತಿ ಹಬ್ಬಿದ ಮೇಲೆ, ಮೋಹಿನಿ ವಿಚ್ಛೇದನಕ್ಕೂ, ರೆಹಮಾನ್ ವಿಚ್ಛೇದನಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುವ ಸ್ಪಷ್ಟನೆಯನ್ನೂ ನೀಡಿದರು.

ವಿಚ್ಛೇದನ ಆಗಿರುವ ವಿಷಯದ ಕುರಿತು ಮೊದಲು ಹೇಳಿಕೆ ಬಿಡುಗಡೆ ಮಾಡಿದ್ದು ಸಾಯಿರಾ ಬಾನು. ಅದಾದ ಮೇಲೆ ರೆಹಮಾನ್ ಹಾಗೂ ಸಾಯಿರಾ ಇಬ್ಬರೂ ಜಂಟಿ ಹೇಳಿಕೆ ಮೂಲಕ ಇದನ್ನು ಸ್ಪಷ್ಟಪಡಿಸಿದರು. ಖತೀಜಾ, ರಹೀಮಾ ಎಂಬಿಬ್ಬರು ಹೆಣ್ಣುಮಕ್ಕಳು ಹಾಗೂ ಎ.ಆರ್. ಅಮೀನ್ ಎನ್ನುವ ಮಗ ಈ ದಂಪತಿಗೆ ಇದ್ದಾರೆ. ಅವರೂ ತಮ್ಮ ಖಾಸಗೀತನವನ್ನು ಗೌರವಿಸಬೇಕು ಎಂದು ವಿನಂತಿಸಿಕೊಂಡಿದ್ದೂ ಆಯಿತು.

ರೆಹಮಾನ್ ಅವರ 'ಎಕ್ಸ್'ನ ಪೋಸ್ಟ್ ಅವರ ಸ್ವರ ಸಂಯೋಜನೆಯಂತೆಯೇ ಕಾವ್ಯಾತ್ಮಕವೂ ಆಗಿತ್ತು. 'ಭಗವಂತ ಕುಳಿತ ಸಿಂಹಾಸನವೇ ಒಡೆದ ಹೃದಯಗಳ ಭಾರದಿಂದ ಕಂಪಿಸುವ ದಿನಗಳೂ ಇರುತ್ತವೆ' ಎಂಬ ಒಕ್ಕಣೆಯ ಕುರಿತೇ ಅನೇಕರು ಚರ್ಚಿಸಿದ್ದಾರೆ.

ಒಂದು ಕಡೆ ರೆಹಮಾನ್ ವಿಚ್ಛೇದನಾ ನಂತರ ಅವರ ಪತ್ನಿಯ ಇತಿ–ವೃತ್ತಾಂತ ಅರಿಯುವ ಮನಸ್ಸುಗಳು ಜಾಗೃತವಾಗಿದ್ದರೆ, ಇನ್ನೊಂದು ಕಡೆ ಕುತೂಹಲದ ಕಣ್ಣು ನಟ ನಾಗ ಚೈತನ್ಯ ಹಾಗೂ ನಟಿ–ರೂಪದರ್ಶಿ ಶೋಭಿತಾ ಧುಲಿಪಾಲ ಮದುವೆಯ ಕಡೆಗೆ ನೆಟ್ಟಿದೆ. ನಟಿ ಸಮಂತಾ ಅವರಿಗೆ ವಿಚ್ಛೇದನ ನೀಡಿದ ನಂತರ ನಾಗ ಚೈತನ್ಯ ಮರುವಿವಾಹವನ್ನೂ ಸಾಕಷ್ಟು ಸದ್ದಿನಿಂದಲೇ ಆಗುತ್ತಿದ್ದಾರೆ.

ಮದುವೆ, ಮರು ಮದುವೆ, ವಿಚ್ಛೇದನ, ವದಂತಿ ಎಲ್ಲಕ್ಕೂ ಯಾವತ್ತಿಗೂ ಮಾರುಕಟ್ಟೆ ಇರುತ್ತದೆ ಎನ್ನುವ ಸತ್ಯಕ್ಕೂ ಇವೆಲ್ಲ ಕನ್ನಡಿ ಹಿಡಿಯುತ್ತಿವೆ. ■



## ನಯನತಾರಾ-ಧನುಶ್ ಪಿರಿಪಿರಿ

'ನಾನುಂ ರೌಡಿ ದಾನ್' ಎಂಬ ತಮಿಳು ಸಿನಿಮಾದ ಮೂರು ಸೆಕೆಂಡುಗಳ ತುಣುಕನ್ನು 'ನಯನತಾರಾ ಬಿಯಾಂಡ್ ದಿ ಫೇರಿ ಟೇಲ್' ಎನ್ನುವ ನೆಟ್‌ಫ್ಲಿಕ್ಸ್ ಕಿರುಚಿತ್ರದಲ್ಲಿ ಬಳಸಲಾಗಿತ್ತು. ಅದಕ್ಕೆ ನಟ ಧನುಶ್ 10 ಕೋಟಿ ರೂಪಾಯಿ ಪರಿಹಾರ ಕೋರಿ ವಕೀಲರ ನೋಟಿಸ್ ಕಳುಹಿಸಿದ್ದು, ನವೆಂಬರ್ 16ರಂದು ನಯನತಾರಾ ಕೋಪ ಹೊರಹಾಕಲು ಕಾರಣವಾಯಿತು.

2015ರಲ್ಲಿ ಆ ಸಿನಿಮಾ ತೆರೆಕಂಡಿದ್ದು. ಧನುಶ್ ಚಿತ್ರದ ನಟರಷ್ಟೇ ಅಲ್ಲದೆ ನಿರ್ಮಾಪಕರಲ್ಲಿಯೂ ಒಬ್ಬರಾಗಿದ್ದರು. ವಿಘ್ನೇಶ್ ಶಿವನ್ ಆ ಸಿನಿಮಾ ನಿರ್ದೇಶನ ಮಾಡಿದ್ದರು. ಚಿತ್ರವು ನಯನತಾರಾ ವೃತ್ತಿಬದುಕಿಗೆ ಅಷ್ಟೇ ಅಲ್ಲದೆ ಖಾಸಗಿ ಬದುಕಿಗೂ ತಿರುವು ನೀಡಿತು. ವಿಘ್ನೇಶ್ ಈಗ ನಯನತಾರಾ ಪತಿ.

ಸಿನಿಮಾ ಚಿತ್ರೀಕರಣದ ಹಂತದಿಂದಲೇ ಸೃಜನಾತ್ಮಕ ಭಿನ್ನಾಭಿಪ್ರಾಯಗಳು ಧನುಶ್ ಹಾಗೂ ವಿಘ್ನೇಶ್ ಅವರಿಗೆ ಇತ್ತು. ಇದೀಗ ಅದು ಸೇಡಿನ ರೂಪದಲ್ಲಿ ಹೊರಬಂದಿದೆ ಎನ್ನುವುದು ನಯನತಾರಾ ಮಾಡಿರುವ ಒಂದು ಆರೋಪ. ಧನುಶ್ ಅವರನ್ನು ಕ್ರೂರಿ, ಕಷ್ಟಪಟ್ಟು ಸ್ವಂತ ಬಲದಿಂದ ಮೇಲೆ ಬರುವವರನ್ನು ಸಹಿಸದ ಸ್ವಭಾವದವರು ಎಂದೂ ನಯನತಾರಾ ಟೀಕಿಸಿದ್ದಾರೆ. ಈ ಯಾವುದಕ್ಕೂ ಧನುಶ್ ಏನೊಂದೂ ಹೇಳದೆ ತಮ್ಮಷ್ಟಕ್ಕೆ ತಾವು ಮುಗುಳ್ನಗುತ್ತಾ ಇದ್ದಾರೆ. ■